
# ಸಚಿತ್ರ ಶಿರಶಾಸ್ತ್ರ



ಎರಡು ತಲೆ ಹಾವು
ಇದು ಉತ್ಪ್ರೇಕ್ಷಾಲಂಕಾರ
ಅದಕ್ಕೂ ಒಂದೆ ತಲೆ ಇನ್ನೊಂದು ಬಾಲ
ಎರಡೂ ಕಡೆಯಿಂದ ತೆವಳುವುದು ಅದರ ಕರ್ಮ
ಸಂಚಿತವೋ ಪ್ರಾರಬ್ಧವೋ ಯಾವುದೋ ಒಂದು
ಸ್ವರಕ್ಷಣೆಗೆ ಈ ಆಟ ಅನ್ನುತ್ತದೆ ಪ್ರಾಣಿಶಾಸ್ತ್ರ

ಮನುಷ್ಯರಿಗೆ ಒಂದು ಮುಖ
ಮುಖವಾಡಗಳೊ
ಅನೇಕ
ಎನ್ನುತ್ತದೆ ಸಾಹಿತ್ಯ, ಪದ್ಯ ಗದ್ಯ ನಾಟಕ
ಎಲ್ಲದರಲ್ಲೂ ಇಂತಹವರನ್ನು ಚಚ್ಚಿ ಚಚ್ಚಿ
ಕೊಲ್ಲುತ್ತೇವೆ ನಾವು ಲೇಖಕ/ಕಿಯರು

ಹಾಗೆ ಕೊಲ್ಲುವಾಗ ನಮಗೂ ಅನೇಕ ಮುಖ
ಹ್ಯಾಗೆ ಕೊಂದರೆ ಅವಾರ್ಡು ಬರಬಹುದೆಂಬುದು
ಒಂದನೆಯದು; ಎಡಕೊ ಬಲಕೊ
ಎತ್ತ ಇರಿದರೆ ನಾವು ಸೇಫೆಂಬುದು ಎರಡನೇದು;
ಮೂರನೆಯದು ಪಾಪ, ನಮ್ಮ ಸ್ವಂತದ್ದು
ಸದಾ ನೀರು ನೆರಳುಳ್ಳ ಜಾಗ ಬಯಸುವ
ಸಹಜದ್ದು; ನಾಲ್ಕನೆಯದು ರಾಮನನ್ನು ಮತ್ತು
ರಹೀಮನನ್ನು ಯಾವಾಗ್ಯಾವಾಗ ಎಲ್ಲೆಲ್ಲಿ
ಎತ್ತಿ ಕಟ್ಟಬೇಕೆಂಬುದನರಿತ ನಾಜೂಕಯ್ಯನದು;
ಐದನೆಯದು ಮೂರು ಕಾಸಿಗುಪಯೋಗವಿರದ
ಎಲ್ಲವನೂ ಅರಿತುದ್ದಾಮ ಪಂಡಿತನದು;
ಬೀದಿಸೂಳೆಯ ನಿಯತ್ತಿರದ
ಆರನೆಯದೊಂದಿದೆ, ತಲೆ ಬಾಲ ಕಾಲು
ಯಾವುದೇ ಸಿಕ್ಕಿದರದನು ಗಪ್ಪಂಥ
ಹಿಡಿಯುವುದು.

ಹೀಗೆ ಅನೇಕಾನನಗಳುಳ್ಳ
ನಾವು ಅರವಿಂದ ದಳ ನೇತ್ರ/ತ್ರೆಯರು
ಅನೇಕ ಕೊಲೆಗಳನ್ನು ಮಾಡಿಯೂ
ಪೀನಲು ಕೋಡಿಗೊಳಪಡದವರು
ಭಾಷಣಿಸುತ್ತೇವೆ ದಕ್ಕಿದ ವೇದಿಕೆ
ಒಂದೂ ಬಿಡದೆ
ವಿಷಯ ಮಾತ್ರ ಅದೇ
ನೆಲಮೂಲ ಜಲಮೂಲ ತಳಿಮೂಲ
ಮೂಲ ಮೂಲ ಮೂಲ ಮೂಲ
ಮೂಲದ್ದೇ ಮೂಲವ್ಯಾಧಿ